ದಿನಾಂಕ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿ ಪರ ಮಾನ್ಯ ಸರ್ಕಾರಿ ವಕೀಲರಿಂದ.

ನಾನು ಬಿ ಎ ಮತ್ತು ಬಿ ಎಡ್ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಈಗ ಸೈಹಾದ್ರಿ ಪ್ರೌಢ ಶಾಲೆ ಗೋದೋಳಿ, ಬೆಳಗಾವಿ ಜಿಲ್ಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಕ್ಕೆ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದೀರಿ ಎಂದರೆ ಸಾಕ್ಷಿ ನನ್ನ ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಹೆಸರು ಬಾಳಪ್ಪ ಸದಾಶಿವ ಜಾಧವ್ ಎಂದು ಇರುವುದನ್ನು ಬಾಳಪ್ಪ ನೀಲಕಂಠ ಜಾಧವ್ ಎಂದು ಆಗಬೇಕು ಎಂದು ಹೂಡಿದ್ದೇನೆ. ಸದಾಶಿವ ಜಾಧವ್ ರವರು ನನ್ನ ತಂದೆಯ ಅಜ್ಜ. ಅವರಿಗೆ ಐದು ಜನ ಮಕ್ಕಳು ಇರಬಹುದು. ಸದಾಶಿವ ಜಾಧವ್ ರವರು ನಿಮ್ಮ ಮುತ್ತಜ್ಜ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀಲಕಂಠ ಜಾಧವ್ ರವರು ನನಗೆ ಅಜ್ಜನಾಗಬೇಕು. ನೀಲಕಂಠ ಜಾಧವ್ ರವರಿಗೆ ನನ್ನ ತಂದೆ ಮಾತ್ರ ಮಗ. ನೀಲಕಂಠ ಜಾಧವ್ ರವರಿಗೆ ನನ್ನ ತಂದೆ ಬಿಟ್ಟು ಬೇರೆ ಯಾರು ಮಕ್ಕಳು ಇಲ್ಲ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀಲಕಂಠ ಜಾಧವ್ ರವರು ನಿಮ್ಮ ತಂದೆ ಬಾಳಪ್ಪ ರವರ ತಂದೆ ಎಂದು ತೋರಿಸಲು ಮರಣ ಉತಾರ ಮತ್ತು ಜನನ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದೇನೆ. ನನ್ನ ಜನನ ಪ್ರಮಾಣ ಪತ್ರದಲ್ಲಿ

ನನ್ನ ತಂದೆಯ ಹೆಸರು ಬಾಳಪ್ಪ ಜಾಧವ್ ಎಂದು ಇದೆ. ನೀವು ಎಲ್ಲಾ ದಾಖಲೆಗಳನ್ನು ಓದಿ ನೋಡಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ನಾನು ಚಿಕ್ಕವನಿದ್ದಾಗ ತಪ್ಪಾಗಿದೆ ಎನ್ನುತ್ತಾರೆ.

ಸಾಕ್ಷಿ ಮುಂದುವರೆದ  ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.